ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ರಸ್ತೆಯನ್ನು ಮಾಡುವುದಕ್ಕೋಸ್ಕರ ಅಂದಾಜನ್ನು ತಯಾರುಮಾಡಿದೆ. ಕೆಲವು ಫಾರ್ಮ್ಯಾಲಿಟೀಸ್ ಅಬ್ಸರ್ವ ಮಾಡ ತಕ್ಕದ್ದು ಇದೆ. ಇದನ್ನು ಮಾಡಿದ ಮೇಲೆ ಮುಂದಿನ ಕ್ರಮವನ್ನು ವಿಚಾರ ಮಾಡುತ್ತೀವೆ.

ಶ್ರೀ ಬಿ. ಇ. ರಾಮಯ್ಯ.— ೧೯೭೩-೭೪ ನೇ ಸಾಲಿನಲ್ಲಿ ಈ ರಸ್ತೆಯ ಕೆಲಸವನ್ನು ಶುರು ಮಾಡುತ್ತೀರಾ ?

(ಉತ್ತರ ಇಲ್ಲ.)

NON DEPOSITING OF AMOUNT BY ARRACK CONTRACTOR OF UDIPI

198. Sri J. L. KABADE (Ballolli).—Will the Chief Minister be pleased to state:—

(a) whether it is a fact that Sri Ashok Kumar, Arrack Contractor from Udipi has not deposited the amount according to the rules of the auction sale of arrack;

(b) whether any petitions and wires in this regards were received by the Government.

(c) if so, the action taken by the Government in the matter;

(d) whether it is a fact that the concerned authorities have not taken any action against the contractor as per rules?

Sri D. DEVARAJ URS (Chief Minister).—

(a) No.

(b) Yes.

(c) No action was necessary on the petitions and wires in view of answer to (a).

(d) Does not arise.

ಶ್ರೀ ಜೆ. ಎಲ್. ಕಬಾಡಿ.— ಹರಾಜಿನ ಮೂಲಕ ಸಾರಾಯಿ ಮಾರಾಟ ಮಾಡುವುದಕ್ಕೆ ನಿಯಮಗಳ ಮೇರೆಗೆ ಕಂಟ್ರಾಕ್ಟದಾರ ಠೇವಣಿಯನ್ನು ಇಡದಿರುವುದು ನಿಜವೇ ಎಂದು ಕೇಳಿದ್ದಕ್ಕೆ ನಿಜವಲ್ಲ ಎಂದು ಹೇಳಿದ್ದೀರಿ. ಹರಾಜು ಮಾಡಿದಮೇಲೆ ಕಂಟ್ರಾಕ್ಟದಾರ ನಿಯಮದ ಪ್ರಕಾರ ಹಣ ಕಟ್ಟಿದ್ದನೇ, ಹೇಗೆ? ಕಟ್ಟಿದ ಹಣ ಎಷ್ಟು ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ೮—೬—೧೯೭೩ ರಲ್ಲಿ ಹರಾಜನ್ನು ಕನ್ಫರ್ಮ್ ಮಾಡಿದ್ದು, ಕನ್ಸ್ಟ್ರಕ್ಷೇನ್ ತಿಳುವಳಿಕೆಯನ್ನು ಕೊಟ್ಟರತಕ್ಕದ್ದು ೧೪—೬—೧೯೭೩ ರಲ್ಲಿ, ಆವನು ಹಣ ಕಟ್ಟರತಕ್ಕದ್ದು ೨೯—೬—೧೯೭೩ ರಲ್ಲಿ

ಶ್ರೀ ಜೆ. ಎಲ್. ಕಬಾಡಿ.— ಕನ್‌ಫರ್ಮ್ ಮಾಡಿದ ೧೫ ದಿವಸದೊಳಗೆ ಹಣವನ್ನು ಅವನು ಕಟ್ಟಬೇಕಾಗಿತ್ತು, ಕಟ್ಟಲಿಲ್ಲ ಎನ್ನುವುದಕ್ಕೆ ಯಾವ ಕ್ರಮವನ್ನು ಕಂಟ್ರಾಕ್ಟರ ಮೇಲೆ ತೆಗೆದು ಕೊಂಡಿದ್ದೀರಿ ?

ಶ್ರೀ ಎಚ್ ಎಂ. ಚನ್ನಬಸಪ್ಪ.— ಹರಾಜನ್ನು ಕನ್‌ಫರ್ಮಂಮಾಡಿ, ಅವನಿಗೆ ತಿಳುವಳಿಕೆ ಕೊಟ್ಟಿದ್ದು ೧೪ ನೆಯ ತಾರೀಖು. ತಿಳುವಳಿಕೆ ಕೊಟ್ಟ ತಾರೀಖಿನಿಂದ ಹಣಕಟ್ಟದೆ ಇರುವುದು ಲೆಕ್ಕಕ್ಕೆ ಬರುತ್ತದೆ, ಈಗ ಅವನು ಕರಾರುವಾಕ್ ಆಗಿ, ಕಾಲಕ್ಕೆ ಸರಿಯಾಗಿ ಹಣ ಕಟ್ಟಿದ್ದಾನೆ.

ಶ್ರೀ ಜೆ. ಎಲ್. ಕಬಾಡಿ.— ವಿಧಿ ನಿಯಮಗಳಿಗನುಸಾರವಾಗಿ, ಕಂಟ್ರಾಕ್ಟ ದಾರನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಯಾವುದೋ ಒಂದು ಪ್ರಭಾವಕ್ಕೆ ಒಳಗಾಗಿದ್ದರಿಂದ ಸಾಧ್ಯವಾಗಲಿಲ್ಲ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಯಾರ ಪ್ರಭಾವವೂ ನಮ್ಮ ಮೇಲೆ ನಡೆಯುವುದಿಲ್ಲ. ಎಂದು ಸ್ಪಷ್ಟಪಡಿಸುತ್ತೇನೆ.

MADAM SPEAKER.—Now we will take up short Notice questions 6 and 19, together.

SHORT NOTICE QUESTIONS AND ANSWERS

FEES PAID TO ADVOCATES AND OTHERS CONNECTED WITH KRISHNA—GODAVARI WATER DISPUTES TRIBUNAL

6. Sri M.S.KRISHNAN (Malleswaram).—Will the Minister of State for Major Irrigation be pleased to state.—

(a) the stage at which the dispute in respect of sharing of waters of Krishna-Godavari is pending before the tribunal;

(b) the amount spent for the Advccates and others who are arguing the case of Mysore or assisting the Government (Details of the names and amounts spent on each person for this work before the Tribunal may be furnished);

(c) the action the Government has taken to expedite the matter?

Sri H. M. NANJE GOWDA (Minister of State for Major Irrigation.)—(a) (i) The final arguments of all the States regarding Krishna Water Disputes in respect of sharing of waters of river Krishna have been completed on 23rd August, 1973.